





**ಕುಮಾರ ತುಷಾರ ಕುರಿ**
9ನೇ ತರಗತಿ, ಗದಗ ಪಬ್ಲಿಕ್ ಸ್ಕೂಲ್
ಗದಗ



**ಮಯೂರ್**
7ನೇ ತರಗತಿ, ಸರ್ಕಾರಿ ಪ್ರಾಥಮಿಕ ಶಾಲೆ
ಬದನಾಜೆ, ಉಜಿರೆ



**ವೇದಾಂತ್ ಆರ್.**
5ನೇ ತರಗತಿ, ಕನಕಪುರ
ರಸ್ತೆ, ಬೆಂಗಳೂರು




ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in



# ಮದುವೆ ಊಟ

■ **ಮಹಾಂತೇಶ ಮಾಗನೂರ**

ಕಲೆ: ಸಂತೋಷ್ ಸಸಿಹಿತ್ಲು

ಕಟಲೆಟ್ ಬೋಂಡಾ
ರುಚಿಕರ ವಡಾ ಪಾವ್
ಕಣ್ಮುಚ್ಚಿ ತಿಂದದ್ದಾಯ್ತು
ಎನ್ನುತ ವಾವ್ ವಾವ್

ಪುಲಾವ್ ಬಿರಿಯಾನಿ
ರೊಟ್ಟಿ ಪೂರಿ ಪರೋಟಾ
ತಿಂದು ಮುಗಿಸಿದ್ದೇವೆ
ಒಂದೆರಡು ವಾರದ ಕೋಟಾ
ಸಿಹಿ ಖಾದ್ಯಗಳದ್ದಂತು ರಾಶಿ

ಜಾಮೂನು ಪಾಯಸ ಪೇಡಾ
ತಿಂದದ್ದನು ಅರಗಿಸಲು
ಕೊನೆಗೆ ಅದ್ಭುತ ಬೀಡಾ

ವಿಧ ವಿಧ ಭಕ್ಷ್ಯ
ತುಂಬಿತ್ತು ವಿವಿಧತೆ
ಇಷ್ಟು ತಿಂದ ಮೇಲೆ
ಹೊಟ್ಟೆಯದ್ದು ಏನು ಕಥೆ? ■